# ಶಿಕ್ಷಣ ಮತ್ತು ಸಂಸ್ಕೃತಿ

ಸ್ವಾಮಿ ಗೌತಮಾನಂದ



## ಯುವವೇದಿಕೆ

ಚೈನ್ನೈನಲ್ಲಿರುವ ವಿವೇಕಾನಂದ ಕಾಲೇಜಿನಲ್ಲಿ ೨.೮.೨೦೦೦ ದಂದು ಮಾಡಿದ ಘಟಿಕೋತ್ಸವ ಭಾಷಣದ ಸಂಗ್ರಹ. ಶಿಕ್ಷಣ ಕ್ರಾಂತಿಯ ಮೂಲಕ ದೇಶದ ಉದ್ಧಾರ ಮತ್ತು ಆ ಶಿಕ್ಷಣವು ಕೇವಲ ಲೌಕಿಕವಾಗಿರದೆ ನೈತಿಕ ಮತ್ತು ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರಬೇಕು ಎಂದು ಸ್ವಾಮಿ ಗೌತಮಾನಂದರು ಅಭಿಪ್ರಾಯಪಡುತ್ತಾರೆ. ಪೂಜ್ಯ ಸ್ವಾಮೀಜಿಯವರು ಚೆನ್ನೈನಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರೂ ರಾಮಕೃಷ್ಣ ಮಿಷನ್ನಿನ ಟ್ರಸ್ಟಿಗಳೂ ಆಗಿರುವರು. ಈ ಭಾಷಣವನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದವರು ಶ್ರೀ ಹೆಚ್. ಪಾಂಡುರಂಗ ವಿಠಲ.

**ಭಾರತದಲ್ಲಿ** ರಾಷ್ಟ್ರೀಯತೆಯು ಎಚ್ಚರಗೊಳ್ಳಲು ಸ್ವಾಮಿ ವಿವೇಕಾನಂದರು ಕಾರಣಪುರುಷರು. ಅವರ ಜೀವನ, ಭಾಷಣ ಮತ್ತು ಬರಹಗಳು ಕಳೆದ ಶತಮಾನದ ಸಾಮಾಜಿಕ, ಧಾರ್ಮಿಕ, ರಾಜಕೀಯ ರಂಗಗಳ ನೇತಾರರನ್ನು ಪ್ರಭಾವಿತಗೊಳಿಸಿವೆ. ಶಿಕ್ಷಣದ ಅರ್ಥವನ್ನು ಕುರಿತು ವಿವೇಕಾನಂದರು ಹೀಗೆ ಹೇಳಿದ್ದಾರೆ:

- ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿಯೇ ಶಿಕ್ಷಣ.
- ಶಿಕ್ಷಣವೆಂದರೆ ಇಚ್ಛೆಯನ್ನು ಕಾರ್ಯಕಾರಿಯಾಗಿ ಬಳಸುವ ಸಾಮರ್ಥ್ಯದ ತರಬೇತಿ ಅಥವಾ ಬೆಳವಣಿಗೆ ಎಂದು ಹೇಳಬಹುದು.
- ಇಚ್ಛೆಯ ಹರವು ಮತ್ತು ಅಭಿವ್ಯಕ್ತಿಯನ್ನು ನಿಯಂತ್ರಿಸಿ ಪರಿಣಾಮಕಾರಿಯನ್ನಾಗಿಸುವ ಕಲಿಕೆಯೇ ಶಿಕ್ಷಣ.
- ಶಿಕ್ಷಣದ ಆದರ್ಶವು ಮನಸ್ಸಿನ ಮೇಲೆ ಸಂಪೂರ್ಣ ಪ್ರಭುತ್ವವನ್ನು ಹೊಂದುವುದು. ವ್ಯಕ್ತಿಯನ್ನು ರೂಪಿಸುವ, ನಡತೆಯನ್ನು ನಿರ್ಮಿಸುವ, ಜೀವನ ದಾಯಿಯಾದ ವಿಚಾರಗಳನ್ನು ಅರಗಿಸಿಕೊಳ್ಳುವುದೇ ಶಿಕ್ಷಣ.
- ಏಕಾಗ್ರತೆಯನ್ನು ಮತ್ತು ಅನಾಸಕ್ತಿ (ರಾಗ-ದ್ವೇಷಗಳಿಂದ ನಿವೃತ್ತಿ)ಯನ್ನು ನಿಜವಾದ ಶಿಕ್ಷಣ ಬೆಳೆಸಬೇಕು.

ಮೇಲಿನ ಹೇಳಿಕೆಗಳಿಂದ ನಾವು ಏಕಾಗ್ರತೆ, ವ್ಯಕ್ತಿ ಮತ್ತು ವಸ್ತುಗಳ ಮೇಲಿನ ರಾಗ-ದ್ವೇಷಗಳ ನಿವೃತ್ತಿ, ವ್ಯಕ್ತಿತ್ವ ನಿರ್ಮಾಣ, ನಿರ್ಭಯತೆ, ದೃಢತೆ, ಪ್ರೀತಿಸುವ, ಸೇವೆಮಾಡುವ ಹೃದಯ—ಈ ಶಕ್ತಿಗಳನ್ನು ನಾವು ಬೆಳೆಸಿಕೊಳ್ಳಬೇಕು; ಸುಶಿಕ್ಷಿತ ವ್ಯಕ್ತಿಯ ಗುಣಗಳು ಇವು ಎಂದು ತಿಳಿಯಬಹುದು.

ವಿವೇಕಾನಂದರ ಕಾಲದಲ್ಲಿ ಸ್ವಾತಂತ್ರ್ಯಾನಂತರ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದಿತ್ತು. ಹಿಂಸೆಯಿಂದ ಕೂಡಿದ ರಕ್ತಕ್ರಾಂತಿಯೇ ಇದಕ್ಕೆ ಮಾರ್ಗ ಎಂದು ಹೆಚ್ಚು ಜನ ನಂಬಿದ್ದರು. ವಿವೇಕಾನಂದರ ತಮ್ಮ ಡಾ. ಭೂಪೇನ್ ದತ್ತ, ಅರವಿಂದರು, ನಿವೇದಿತಾ, ಭಗತ್ ಸಿಂಗ್ ಮೊದಲಾದವರು ಇದಕ್ಕೆ ಉದಾಹರಣೆ.

> **ಕ್ರಾಂತಿಯ ನಿಜವಾದ ಆಯುಧ ಶಿಕ್ಷಣವೇ ;**
> **ರಕ್ತಪಾತವಲ್ಲ.**
> **ಶಿಕ್ಷಣ ಕ್ರಾಂತಿಯು ರಕ್ತರಹಿತ ಕ್ರಾಂತಿ.**

ಸ್ವಾಮೀಜಿ ಕಮ್ಮಿ ಕ್ರಾಂತಿಕಾರಿಯಲ್ಲ; ಆದರೆ ಚರಿತ್ರೆಯ ವಿನೀತ ವಿದ್ಯಾರ್ಥಿಯಾಗಿದ್ದ ಅವರು ಸಾಮಾನ್ಯ ಜನರನ್ನು ವಿಮೋಚಿಸುವ ಉದ್ದೇಶವನ್ನು ಹಿಂಸಾಕ್ರಾಂತಿಯು ಸಾಧಿಸಲಾರದು ಎಂದು ಅರಿತಿದ್ದರು. ಫ್ರೆಂಚ್ ಕ್ರಾಂತಿಯು ಮತ್ತೂ ಕ್ರೂರವಾದ ಸರ್ವಾಧಿಕಾರಿತ್ವಕ್ಕೆ ಎಡೆ ನೀಡಿದ ಉದಾಹರಣೆ ಅವರ ಕಣ್ಮುಂದೆ ಇತ್ತು. ರಷ್ಯನ್ ಕ್ರಾಂತಿಯು ಈಚೆಗೆ ವಿಫಲಗೊಂಡಿದ್ದೂ ಹಾಗೆಯೇ. ಕ್ರಾಂತಿ ತಕ್ಕುದಲ್ಲವಾದರೆ, ಮಾರ್ಗ ಯಾವುದು? ಸ್ವಾಮೀಜಿಯ ಉತ್ತರ : "ಶಿಕ್ಷಣ". ಮೂಕಸಮೂಹಗಳನ್ನು ಶಿಕ್ಷಣವು ಮನುಷ್ಯರನ್ನಾಗಿ ಪರಿವರ್ತಿಸಬಲ್ಲುದು. ಸಮೂಹದೊಳಗಿಂದ ನಿರ್ಮಾಣಗೊಂಡ ನಾಯಕರು ನೈಜ ಪ್ರೀತಿ, ಕಾಳಜಿಗಳಿಂದ ಸಮೂಹವನ್ನು ಕಾಯ್ದುಕೊಳ್ಳಬಲ್ಲರು. ನಿಃಸ್ವಾರ್ಥತೆ, ಸೇವೆ, ಪ್ರೀತಿ, ಅಸೂಯಾ ರಾಹಿತ್ಯ, ಸಮಸ್ಯೆಗಳನ್ನು ವಿಶ್ಲೇಷಿಸಿ ಪರಿಹರಿಸಬಲ್ಲ ಬುದ್ಧಿ, ದೇಶವನ್ನು ಅಭಿವೃದ್ಧಿಗೊಳಿಸುವಲ್ಲಿ ತನ್ನ ಬಲದಲ್ಲಿ ಶ್ರದ್ಧೆ—ಇವೆಲ್ಲ ಮೌಲ್ಯಗಳನ್ನು ನೈಜ ಶಿಕ್ಷಣ ಮಾತ್ರ ಸಾಧಿಸಬಲ್ಲುದು. ಈ ಮೌಲ್ಯಗಳು ಮತ್ತು ಆಧುನಿಕ ಶಿಕ್ಷಣ ಅಂತಹ ಶಕ್ತಿಶಾಲಿ ತರುಣ ನಾಯಕರನ್ನು ನಿರ್ಮಿಸಬಲ್ಲುದು. ಹೀಗೆ ಕ್ರಾಂತಿಯ ನಿಜವಾದ ಆಯುಧ ಶಿಕ್ಷಣವೇ; ರಕ್ತಪಾತವಲ್ಲ. ಶಿಕ್ಷಣ ಕ್ರಾಂತಿಯು ರಕ್ತರಹಿತ ಕ್ರಾಂತಿ.

ಹಿಂಸೆಯಿಂದ ಕ್ರಾಂತಿಯನ್ನು ಅಳೆಯದೆ ಸಮಾಜದ ಮೇಲಿನ ಪರಿಣಾಮದಿಂದ ಅದನ್ನು ಅಳೆಯಬೇಕು. ಕೈಗಾರಿಕಾ ಕ್ರಾಂತಿಯಲ್ಲಿ

ಹಿಂಸೆ ಇರಲಿಲ್ಲ—ಪರಿಣಾಮದಿಂದಷ್ಟೇ ಅದನ್ನು ಕ್ರಾಂತಿ ಎನ್ನುತ್ತಾರೆ. ಈ ದೃಷ್ಟಿಯಿಂದ ಸಮಾಜದಲ್ಲಿ ತೀವ್ರ ಬದಲಾವಣೆಗಳನ್ನು ತಂದ ಬೌದ್ಧ, ಜೈನ ಧರ್ಮಗಳನ್ನು ಕ್ರಾಂತಿ ಎಂದು ಕರೆದರು ಸ್ವಾಮೀಜಿ. ಇದೇ ರೀತಿ ಈಗ ಶಿಕ್ಷಣದಿಂದ ಕ್ರಾಂತಿ ನಡೆದು ಸಮೂಹದೊಳಗಿಂದ ಸಾಮಾಜಿಕ-ಆರ್ಥಿಕ-ರಾಜಕೀಯ-ಮೊದಲಾದ ಎಲ್ಲ ಬಗೆಯ ನಾಯಕರೂ ಉದ್ಭವಿಸುವರು ಎಂದರು.

ಸಮಾಜದ ಎಲ್ಲ ರೋಗಗಳಿಗೆ ಶಿಕ್ಷಣವೇ ಮದ್ದು ಎನ್ನುವ ಸ್ವಾಮೀಜಿಯ ಕ್ರಾಂತಿಮಾರ್ಗವನ್ನು ಈಚಿನ ರಾಜಕೀಯ ಮುಖಂಡರು ಮನಗಾಣದೆ ಹಿಂಸೆ ಅಥವಾ ಅಹಿಂಸಾಯುಕ್ತ ರಾಜಕೀಯ ಚಳುವಳಿಗಳಿಂದ ಹೇಗಾದರೂ ಅಧಿಕಾರ ಹಿಡಿಯುವ ಪಾಶ್ಚಾತ್ಯ ವಿಧಾನವನ್ನು ಅನುಸರಿಸಿದರು. ಇದರ ಫಲವಾಗಿ ಸಮೂಹದಿಂದ ಬಾರದೆ ಪ್ರತಿಷ್ಠೆಯ ಶ್ರೀಮಂತಿಕೆಯಿಂದ ಬಂದ ಕೆಲವೇ ನಾಯಕರು ರಾಜಕೀಯ ಶಕ್ತಿ ಪಡೆದು ಅದನ್ನು ತಮ್ಮಲ್ಲೇ ಕ್ರೋಡೀಕರಿಸಿ, ತಮ್ಮ ಬಂಧು ಮಿತ್ರರಲ್ಲೇ ಅದನ್ನು ಹಂಚಿಕೊಂಡರು. ಹೀಗಾಗಿ, ಐದು ದಶಕಗಳು ಕಳೆದರೂ ಸಮೂಹಗಳು ಹಿಂದೆ ಹೇಗಿದ್ದರೋ ಇಂದೂ ಹಾಗೆಯೇ ಇದ್ದಾರೆ. ಯಾವುದೇ ಹಳ್ಳಿಗಾಡು ಪ್ರದೇಶಕ್ಕೆ ಹೋಗಿ ನೋಡಿ—ಇದು ಮನದಟ್ಟಾಗುತ್ತದೆ. ಅಹಮ್ಮದಾಬಾದ್‌ನಿಂದ ೭೦ ಮೈಲು ಉತ್ತರಕ್ಕೆ ಸಕ್ವಾರ್ ಎಂಬ ಹಳ್ಳಿಗೆ ಹೋದಾಗ ಅಲ್ಲಿನ ಆದಿವಾಸಿಗಳು ಹೆಸರು ಕಾಳು ಗಂಜಿ ಮಾಡಿ ಕುಡಿಯುತ್ತಿದ್ದರು. ಇದೇನು ಎಂದು ಕೇಳಿದಾಗ, ನಮ್ಮ ಜಮೀನ್ದಾರ ಕೊಟ್ಟಿರೋದು ಇಷ್ಟನ್ನೇ ಎಂದರು! ಆದಿವಾಸಿಗಳ ಜಮೀನು ಪರಭಾರೆಯಾಗದಂತೆ ಶಾಸನವಿದೆ. ಆದರೂ ಸಾಲ ನೀಡಿ, ಅವರ ಜಮೀನಿನಲ್ಲೇ ಅವರನ್ನು ಗುಲಾಮರನ್ನಾಗಿಸುವ ಸಾಹುಕಾರರೂ ಇದ್ದಾರೆ. ಇದಕ್ಕೆಲ್ಲ ಕಾರಣವೇನು? ಈ ಸಮಸ್ಯೆಗೆ ಸ್ವಾಮೀಜಿಯ ಪರಿಹಾರ—**"ಸಮೂಹವನ್ನು ಶಿಕ್ಷಿತರನ್ನಾಗಿಸಿ, ತಾವು ಅಮೃತಪುತ್ರರೆಂಬ ಆತ್ಮಾಭಿಮಾನಕ್ಕೆ ಅವರ ಕಣ್ಣು ತೆರೆಯುವಂತೆ ಮಾಡಿ, ಅನಂತರ ಅವರ ಹಕ್ಕು ಬಾಧ್ಯತೆಗಳನ್ನು ತಿಳಿಸಿ—ಅವರೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ."**

ಈಗಲೂ ಕಾಲ ಮಿಂಚಿಲ್ಲ. ನಮ್ಮ ದೇಶ ಅಭಿವೃದ್ಧಿಯಾಗಲು ಸ್ವಾಮೀಜಿಯವರ ವಿಚಾರಕ್ಕೆ ಕಿವಿಗೊಡಬೇಕು. ಅಂತ್ಯಜರ, ದೀನರ, ಸ್ತ್ರೀಪುರುಷರ ಮನೆಬಾಗಿಲಿಗೇ ಮಾನವನನ್ನು ನಿರ್ಮಿಸಬಲ್ಲ ಶಿಕ್ಷಣವನ್ನು ಒಯ್ಯಬೇಕು. "ನೂರಾರು ಮಕ್ಕಳು ದೂರದಿಂದ ನಡೆದು ಬಂದು ಕೆಲವೇ ಉಪಾಧ್ಯಾಯರ ಬಳಿ ಬರುವುದಕ್ಕಿಂತ, ಅವರ ಜಾಗದಲ್ಲೇ ಉಪಾಧ್ಯಾಯರು ಹೋಗಿ ಅವರನ್ನು ನೋಡುವುದು ಒಳಿತು" ಎಂಬ ಘೋಷಣೆಯೊಂದಿಗೆ ಸೈಕಲ್ಲುಗಳ ಮೇಲೆ ಲಕ್ಷಾಂತರ ಉಪಾಧ್ಯಾಯರನ್ನು ತನ್ನ ಹಳ್ಳಿಗಳಿಗೆ ಕಳಿಸಿದ ಚೀನೀ ಪ್ರಯೋಗ ಗಮನಾರ್ಹ. ನಮ್ಮಲ್ಲೂ ಅಂತಹ ಕ್ರಾಂತಿಕಾರಿ ಪ್ರಯೋಗಗಳು ಬರಬೇಕು. ಅನೇಕ ಎಳೆಯರು ವೈಯಕ್ತಿಕ ಜೀವನವನ್ನು ನಡೆಸಲು ಕೆಲಸ ಹುಡುಕುವುದನ್ನು ಇದಕ್ಕಾಗಿ ತ್ಯಾಗ ಮಾಡಬೇಕು. ಇಲ್ಲಿ ನನ್ನ ಕಹಿ ಅನುಭವ ಒಂದನ್ನು ದಾಖಲಿಸುವುದು ಉಚಿತವೆನಿಸುತ್ತದೆ.

**ಅರುಣಾಚಲ ಪ್ರದೇಶದಲ್ಲಿನ ನಮ್ಮ ಪ್ರೌಢಶಾಲೆಗಾಗಿ ಪದವೀಧರ ಉಪಾಧ್ಯಾಯರು ಬೇಕೆಂದು ದಿಲ್ಲಿಯಲ್ಲಿ ೧೯೭೦ರಲ್ಲಿ ಜಾಹಿರಾತು ಕೊಟ್ಟೆವು. ಒಂದೇ ಒಂದು ಅರ್ಜಿ ಬರಲಿಲ್ಲ!**

ಈಗಿನ ಸುಶಿಕ್ಷಿತರನ್ನು ನೋಡಿ. ಒಂದು ವರ್ಗದವರು ಪಾಶ್ಚಾತ್ಯರನ್ನೇ ಪೂರ್ಣ ಅನುಕರಿಸಿ, ನೈತಿಕತೆ, ಧರ್ಮದ ಜ್ಞಾನಕ್ಕೂ ಆ ಕಡೆಗೇ ತಿರುಗುವರು. ಸಹಸ್ರಾರು ವರ್ಷಗಳ ಹಿನ್ನೆಲೆಯ ನಮ್ಮ ಸಾಂಸ್ಕೃತಿಕ ಪರಂಪರೆ ಅವರ ದೃಷ್ಟಿಯಲ್ಲಿ ನಿರರ್ಥಕ, ಅವೈಜ್ಞಾನಿಕ ಮತ್ತು ಪ್ರಾಯೋಗಿಕ ಅಲ್ಲದ್ದು! ಅಧಿಕಾರಿ ಜನರು ಇನ್ನೊಂದು ವರ್ಗದವರು— ಇವರಲ್ಲಿ ಸೇವೆ, ತ್ಯಾಗ, ದೇಶಭಕ್ತಿಯ ಸ್ಫೂರ್ತಿ ಇಲ್ಲ; ಹೆಚ್ಚಿನವರು ಅನೈತಿಕರಲ್ಲದಿದ್ದರೂ, ಸ್ವಾರ್ಥಿಗಳು, ತತ್ತ್ವರಹಿತರು. ಇಹ-ಪರಗಳ ಆದರ್ಶಗಳನ್ನು ಸಮನ್ವಯಗೊಳಿಸಿದ ನಮ್ಮ ಸಂಸ್ಕೃತಿಯ ದೀರ್ಘ ಚರಿತ್ರೆಯ ಬಗ್ಗೆ ಹೆಮ್ಮೆ ಇಲ್ಲ. ಹೀಗಾಗಿ ನಮ್ಮ ಸಮಾಜದ ಸಮೂಹ ಚಳುವಳಿಗಳ ಬಗ್ಗೆ, ಅವುಗಳ ಹಿಂದಿನ ಅರ್ಥ, ಗುರಿಗಳ ಬಗೆಗೆ ವಿವೇಚಿಸುವ ಸಹಾನುಭೂತಿ ಇಲ್ಲ. ಚಳುವಳಿಗಳ ಹಿಂದಿನ ಕಾರಣಗಳನ್ನೂ ಗುರಿಗಳನ್ನೂ ಅರಿಯುವ ವಿವೇಚನೆಯೇ, ಸಹಾನುಭೂತಿಯೇ ದಕ್ಷ ಆಡಳಿತಗಾರನ ಶ್ರೇಷ್ಠತೆಯ ಗುರುತು.

**ಚಳುವಳಿಗಳ ಹಿಂದಿನ ಕಾರಣಗಳನ್ನೂ ಗುರಿಗಳನ್ನೂ ಅರಿಯುವ ವಿವೇಚನೆಯೇ, ಸಹಾನುಭೂತಿಯೇ ದಕ್ಷ ಆಡಳಿತಗಾರನ ಶ್ರೇಷ್ಠತೆಯ ಗುರುತು.**

ಒಳ್ಳೆಯ ಶಿಕ್ಷಣವು ನಮ್ಮ ಹುಡುಗರನ್ನು ಬುದ್ಧಿವಂತರನ್ನಾಗಿ, ಮಾಹಿತಿವಂತರನ್ನಾಗಿ ಮಾಡುವುದರ ಜೊತೆಗೇ ಅವರು ಉತ್ತಮ ಚಾರಿತ್ರ್ಯ, ದಕ್ಷತೆ, ಧೈರ್ಯ, ಸಾಹಸ, ದೇಶಭಕ್ತಿ, ತ್ಯಾಗ, ಸೇವೆಗಳ ಬಗ್ಗೆ ಒಲವನ್ನೂ ಆದರ್ಶವಾದಿತ್ವವನ್ನೂ ಹೊಂದುವಂತೆ ಮಾಡಬೇಕೆನ್ನುವುದು ಮೇಲಿನ ಮಾತುಗಳ ಸೂಚನೆ. ಈ ಶಿಕ್ಷಣ ಎಂಥದ್ದು? ಸ್ವಾಮೀಜಿಯವರು ಈ ಬಗ್ಗೆ ಹೇಳಿರುವುದನ್ನು ಗಮನಿಸಿ. ಆಧ್ಯಾತ್ಮಿಕ ಹಾಗೂ ಲೌಕಿಕವಾದ ಎಲ್ಲ ಜ್ಞಾನವೂ ನಮಗೆಲ್ಲರಿಗೂ ಸಾಧ್ಯ ಎನ್ನುವ ನಂಬಿಕೆ ಮೊದಲನೆಯ ಅಂಶ. ಹೇಗೆ? ಎಲ್ಲ ಜ್ಞಾನವೂ ಅನಂತ ಆತ್ಮವಾದ ನಮ್ಮ ಒಳಗಿನಿಂದಲೇ ಬರುವಂತಹುದು. ನಾವು ಒಳಗಿರುವ ಸತ್ಯವನ್ನು ಅನಾವರಣಗೊಳಿಸುತ್ತೇವೆ, ಅಷ್ಟೇ. ಅದು ನಿದಿಧ್ಯಾಸನ ಮತ್ತು ಏಕಾಗ್ರತೆಗಳಿಂದ ಪ್ರಜ್ಞೆಯ ಬೆಳಕನ್ನು ಮನಸ್ಸಿನ ಆಳಗಳಿಗೆ ಹರಿಸಿ, ಜ್ಞಾನದ ಹೊಸ ಹೊಸ ಸಂಗತಿಗಳನ್ನು ಕಂಡುಹಿಡಿಯುವುದು. ಇದೇ ಜ್ಞಾನದ ಅನ್ವೇಷಣೆ. ಪ್ರಕೃತಿಯು ಎರಡು ಭಾಗಗಳನ್ನು ಹೊಂದಿದೆ ಎಂದು ವಿವೇಕಾನಂದರು ವಿವರಿಸುತ್ತಾರೆ. ಮೊದಲಿನದು ಬಹಿರಂಗದ ಭೌತಿಕ ಜಗತ್ತು—ನಾವು ವಿಜ್ಞಾನಿ, ಕಲಾಕಾರರಾಗಿ ಇದನ್ನು ತಿಳಿಯುತ್ತೇವೆ. ಎರಡನೆಯದು ಅಂತರಂಗದ ಮನಸ್ಸು, ಆಧ್ಯಾತ್ಮಿಕ ಚೈತನ್ಯವನ್ನು ಹೊಂದಿರುವ ಜಗತ್ತು. ಇದನ್ನು ಅರಿಯುವುದು ಮತ್ತು ನಿಯಂತ್ರಿಸುವುದು ಅತಿ ಮುಖ್ಯ. ಮನಸ್ಸು, ಚೈತನ್ಯವನ್ನು ಕುರಿತು ತಿಳಿಯುವ ಆಧ್ಯಾತ್ಮಿಕ ಶಿಕ್ಷಣವನ್ನು ಉಪನಿಷತ್ತುಗಳು "ಪರಾವಿದ್ಯೆ" ಎನ್ನುತ್ತವೆ. ಮನಸ್ಸನ್ನು ಏಕಾಗ್ರಗೊಳಿಸುವುದು, ಆಸೆ ಮತ್ತು ಹಾದಿ ತಪ್ಪಿಸುವ ಅಂಶಗಳಿಂದ ಅದನ್ನು ಬೇರ್ಪಡಿಸುವುದು ಪರಾವಿದ್ಯೆಯ ಮುಖ್ಯ ತರಬೇತಿ. ಸಂಪೂರ್ಣವಾಗಿ ಏಕಾಗ್ರಗೊಂಡ ಮನಸ್ಸು ಆತ್ಮದ ಅನುಭಗಳನ್ನು

ಹೊಳೆಯಿಸುತ್ತದೆಂದಮೇಲೆ, ಬಹಿರಂಗದ ಸತ್ಯಗಳ ಬಗ್ಗೆ ಹೇಳುವುದೇ ಬೇಡ.

ಎಳೆಯ ವಿದ್ಯಾರ್ಥಿಯನ್ನು ಹಾದಿ ತಪ್ಪಿಸುವುದು ಇಂದ್ರಿಯ ಲೋಲುಪತೆ—ತಿನ್ನುವ, ಕುಡಿಯುವ, ಕಾಮದ ಸುಖದ ಬಗೆಗಿನ ಒಲವು. ಆದ್ದರಿಂದ ಒಳ್ಳೆಯ ಶಿಕ್ಷಣದಲ್ಲಿ ಮನಸ್ಸು ಇಂದ್ರಿಯಗಳ ನಿಗ್ರಹ ಮತ್ತು ಶಿಸ್ತುಬದ್ಧ ಜೀವನಕ್ಕೆ ಪ್ರಾಶಸ್ತ್ಯ ನೀಡಬೇಕು. ಇಂದ್ರಿಯ ನಿಗ್ರಹದಿಂದ ಕಾಮದ ಯೋಚನೆಯನ್ನು ನಿಗ್ರಹಿಸಿ, ಆಳ ಏಕಾಗ್ರತೆ ಹೊಂದಲು ಸಾಧ್ಯ.

ಇತ್ತೀಚಿಗೆ ಅಮೆರಿಕದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಹೇಳಬಯಸುತ್ತೇನೆ. ಅಲ್ಲಿನ ಬಾಸ್ಟನ್ನಿನ ವೇದಾಂತ ಸೊಸೈಟಿಯಲ್ಲಿ ಐವತ್ತು ವರ್ಷಗಳಿಂದ ವೇದಾಂತ ಬೋಧನೆ ನಡೆಸುತ್ತಿದ್ದಾರೆ, ಸ್ವಾಮಿ ಸರ್ವಗತಾನಂದಜಿ. ಅವರು ಒಮ್ಮೆ ಒಬ್ಬ ಸಮಾಜಶಾಸ್ತ್ರದ ಪ್ರಾಧ್ಯಾಪಕರಿಗೆ ಶ್ರೀರಾಮಕೃಷ್ಣ ವಚನವೇದದ ಪ್ರತಿ ನೀಡಿದಾಗ, ಆತ ತೆಗೆದುಕೊಳ್ಳಲು ನಿರಾಕರಿಸಿದರಂತೆ: "ಹೆಣ್ಣು ಮತ್ತು ಹೊನ್ನಿನ ವಿರೋಧವಾಗಿ ಮಾತನಾಡುವ ಈ ಮನುಷ್ಯನ ಬೋಧನೆ ನನಗೆ ಬೇಡ. ಈಗಿನ ಜಗತ್ತಿನಲ್ಲಿ ಇದು ಅಪ್ರಾಯೋಗಿಕ" ಎಂದು ಕಾರಣ ನೀಡಿದರಂತೆ. ಶ್ರೀರಾಮಕೃಷ್ಣರು ಕಾಮದ ಬಗೆಗಿನ ಆಸಕ್ತಿಯನ್ನು ಹಾಗೂ ಹಣ, ಕೀರ್ತಿಗಳ ಬಗೆಗಿನ ಆಸಕ್ತಿಯನ್ನು ಹೆಣ್ಣು-ಹೊನ್ನು ಎಂದು ಕರೆಯುತ್ತಾರಷ್ಟೆ.

ಮುಖ್ಯವಾಗಿ ರೈತ, ಕಾರ್ಮಿಕ, ಬೆಸ್ತ, ಮೋಚಿ, ಜಲಗಾರರ ಮನೆಗಳಿಗೇ ಶಿಕ್ಷಣವನ್ನು ನಾವು ಕೊಂಡೊಯ್ಯಬೇಕು.

ಆಶ್ಚರ್ಯವೆಂದರೆ, ಕೆಲವೇ ದಿನಗಳಲ್ಲಿ ಆತ ಹಿಂದಿರುಗಿ ಒಂದು ಹೆಣ್ಣು-ಹೊನ್ನಿನ ವಿರೋಧದ ಆ ಪುಸ್ತಕ ಕೊಡಿ ಎಂದು ಬಾಸ್ಟನ್ನಿನ ಸ್ವಾಮಿಗಳನ್ನು ಕೇಳಿದನಂತೆ. ಕಾರಣ ಕೇಳಿದಾಗ ಅವರ ಕಾಲೇಜಿಗೆ ದೊಡ್ಡ ಸಮಾಜಶಾಸ್ತ್ರಜ್ಞರೊಬ್ಬರು ಬಂದು ಆಧುನಿಕ ಅಮೆರಿಕಕ್ಕೆ ಬಂದಿರುವ ಸಾಮಾಜಿಕ ರೋಗಗಳ ಬಗ್ಗೆ ಮಾತನಾಡಿದರಂತೆ. ಈ ರೋಗ ಯಾವುದೆಂದರೆ "ಡಾಲರ್ ಮತ್ತು ಲೈಂಗಿಕತೆ" ಎಂದು ಭಾಷಣವನ್ನು ಮುಕ್ತಾಯ ಮಾಡಿದರಂತೆ. ಶತಮಾನದ ಮೊದಲೇ ಈ ಸತ್ಯವನ್ನು ಹೇಳಿದ ಮೇಧಾವಿ ಶ್ರೀರಾಮಕೃಷ್ಣರ ಬಗ್ಗೆ ನೆನಪಾಗಿ, ಆ ಪುಸ್ತಕದ ಬಗ್ಗೆ ಆ ಪ್ರಾಧ್ಯಾಪಕರು ಕುತೂಹಲ ತಾಳಿದರಂತೆ! ಪಶ್ಚಿಮದ ಆಧುನಿಕ ಸಾಮಾನ್ಯ ಮಾನವನ ಅನುಭವ ಇದೇ. ನಿರ್ಮಲತೆ, ತ್ರಿಕರಣ ಶುದ್ಧಿ ಎಂಬುವು ನೈತಿಕತೆಯ ತರಗತಿಯಲ್ಲಿ ಬರುವ ಪದಗಳು ಮಾತ್ರವಲ್ಲ, ಒಳ್ಳೆಯ ಶಿಕ್ಷಣದಿಂದ ಬೆಳೆಸಿಕೊಳ್ಳಬೇಕಾದ ಪ್ರಬಲ ಶಕ್ತಿಗಳು. ಇವು ಮನುಷ್ಯರನ್ನು ಆಧ್ಯಾತ್ಮಿಕರನ್ನಾಗಿಸಿ ನೈಜ ಸಾಮಾಜಿಕ ಸ್ಥಿರತೆ ಮತ್ತು ಅಭಿವೃದ್ಧಿಗೆ ಸಹಾಯಮಾಡಬಲ್ಲವು.

ಮನೋವಾಕ್ಕಾಯವಾಗಿ ಸಾಧಿಸಬೇಕಾದ ಗುರಿ ನಮಗೆ ಇರಲೇಬೇಕು. ಗುರಿಯಿಲ್ಲದ ಜೀವನವು ಚುಕ್ಕಾಣಿಯಿಲ್ಲದ ಹಡಗಿನಂತೆ. ವಿವೇಕಾನಂದರು ಹೇಳುವಂತೆ "ಗುರಿಯಿರುವ ಮನುಷ್ಯ ಐವತ್ತು ಬಾರಿ ತಪ್ಪು ಮಾಡಿದರೆ, ಗುರಿ ಇರದವ ಐವತ್ತು ಸಾವಿರ ಬಾರಿ ತಪ್ಪು ಮಾಡುತ್ತಾನೆ." ಅವರು ನಮ್ಮ ಮುಂದೆ ಇಡುವ ಗುರಿ, **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ**—"ನಾನು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವೆ, ಜೊತೆಗೇ ಜಗತ್ತಿನ ಹಿತಕ್ಕಾಗಿ ಕೆಲಸ ಮಾಡುವೆ"—ಈ ಎರಡು ಗುರಿಗಳೂ ನಮ್ಮ ಕಣ್ಣ ಮುಂದೆ ನಿರಂತರವಾಗಿ ಇರಬೇಕು. ಜಗತ್ತಿನ ಹಿತದ ಕೆಲಸಕ್ಕೆ ವೈಜ್ಞಾನಿಕ ಹಾಗೂ ತಾಂತ್ರಿಕ ಜ್ಞಾನ ಅವಶ್ಯ. ಚರಿತ್ರೆ, ಭೂಗೋಳ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಶಿಕ್ಷಣ ಹಾಗೂ ಸಂಘಟನೆಯ ತತ್ವಗಳು ತಿಳಿದಿರಬೇಕು.

ಅಭಿವೃದ್ಧಿಶೀಲ ದೇಶದಲ್ಲಿ ಇದು ಅಗತ್ಯ. ಮುಖ್ಯವಾಗಿ ರೈತ, ಕಾರ್ಮಿಕ, ಬೆಸ್ತ, ಮೋಚಿ, ಜಲಗಾರರ ಮನೆಗಳಿಗೇ ಈ ಶಿಕ್ಷಣವನ್ನು ನಾವು ಕೊಂಡೊಯ್ಯಬೇಕು. ಆಗ ಆ ಸಮೂಹಗಳೊಳಗಿಂದ ಬೇರುಮಟ್ಟದ ನಾಯಕರು ಹುಟ್ಟಿ ಬರುವರು. ಗ್ರಾಮದ ಕೌಶಲ್ಯಗಳು, ವ್ಯಾಪಾರ, ಕೈಗಾರಿಕೆ, ಉತ್ಪಾದನಾ ವಿಧಾನಗಳಲ್ಲಿ ಪ್ರಾಯೋಗಿಕವಾದ ಬದಲಾವಣೆಗಳನ್ನು ತರುವರು. ಸಮೂಹದೊಳಗಿಂದ ಬಂದವರಾದ್ದರಿಂದ ತಮ್ಮ ಸಹೋದರರ ನೋವುಗಳ ಬಗ್ಗೆ ಅವರಿಗೆ ಸಹಾನುಭೂತಿ ಸಾಧ್ಯ. ಸರ್ಕಾರದಲ್ಲೂ ಅನುಭೂತಿಯಿರುವ ನಾಯಕತ್ವ ಬಂದು, ಬೇರುಮಟ್ಟದಿಂದ ಅಭಿವೃದ್ಧಿ ಸಾಧ್ಯವಾಗುತ್ತದೆ. ದೇಶದ ನಿಜವಾದ ಬೆಳವಣಿಗೆ ಆಗ ಸಾಧ್ಯ. ವೈಜ್ಞಾನಿಕ, ತಾಂತ್ರಿಕ, ಸಂಘಟನಾತ್ಮಕ ಜ್ಞಾನದ ಬೆಳವಣಿಗೆಯಿಂದ ದೇಶದಲ್ಲಿ ಅಪಾರ ಶಕ್ತಿ ಸಂಚಯವಾಗುವುದು; ಈ ಶಕ್ತಿಯನ್ನು ರಚನಾತ್ಮಕ ಮಾರ್ಗಗಳಲ್ಲಿ ನಿರ್ದೇಶಿಸದೆ, ವಿನಾಶದ ಮಾರ್ಗಗಳಲ್ಲಿ ಹರಿಯಲು ಬಿಟ್ಟರೆ, ದೇಶವು ಅನಿಯಂತ್ರಿತ ಸುಖಭೋಗಗಳಲ್ಲಿ, ಅನೈತಿಕತೆಯಲ್ಲಿ ಮುಳುಗುವುದೆಂಬುದನ್ನು ಸ್ವಾಮೀಜಿ ಅರಿತಿದ್ದರು. ಇದು ದೇಶದ ಸಾಮಾಜಿಕ ರಾಜಕೀಯ ನೇಯ್ಗೆಯನ್ನು ತುಂಡರಿಸಿ, ಸಮಾಜವನ್ನು ಹಾಳುಗೆಡವುತ್ತದೆ. ಮಹಾನ್ ರೋಮ್ ಚಕ್ರಾಧಿಪತ್ಯ ಕುಸಿದು ನಾಶವಾದದ್ದು ಇದರಿಂದಲೇ—ಹೆಚ್ಚಿದ ಸುಖಭೋಗ ಹಾಗೂ ಅನೈತಿಕತೆಯಿಂದ.

ನೀತಿ ಮತ್ತು ಆಧ್ಯಾತ್ಮಿಕ ಶಕ್ತಿ ಮಾತ್ರ ಒಂದು ದೇಶವನ್ನು ಒಟ್ಟಾಗಿರಿಸಿ, ಅದರ ಪ್ರಜೆಗಳು ಶಕ್ತಿವಂತರೂ, ಐಕ್ಯತೆಯಲ್ಲಿರುವವರೂ ಆಗಿರುವಂತೆ ಮಾಡಬಲ್ಲುದು. ಆದ್ದರಿಂದ ಶಿಕ್ಷಣದಲ್ಲಿ ನೈತಿಕಮೌಲ್ಯಗಳನ್ನು ಅಳವಡಿಸಲೇಬೇಕಾಗಿದೆ. ನೈತಿಕತೆಯ ಮುಂದುವರಿದ ಭಾಗವೇ ಆಧ್ಯಾತ್ಮಿಕತೆ. ನೈತಿಕತೆಯ ಕೇಂದ್ರ, ಸ್ವಾಮೀಜಿ ಹೇಳುವಂತೆ "ನಿಃಸ್ವಾರ್ಥ." ಅವರು "ನಾನೇಕೆ ನಿಃಸ್ವಾರ್ಥಿಯಾಗಿರಬೇಕು" ಎಂದು ಕೇಳಿ, "ಎಲ್ಲರೂ ನನ್ನ ಆತ್ಮವೇ ಆದ್ದರಿಂದ" ಎಂದು ಉತ್ತರಿಸುತ್ತಾರೆ. ತಾನು ಒಬ್ಬ, ಸಮಾಜದ ಇತರರು ತನ್ನಿಂದ ಬೇರೆ ಎಂಬುದರ ಮೇಲೇ ಸ್ವಾರ್ಥ ನಿಂತಿದೆ. ಆದರೆ ವೇದಕಾಲದಿಂದ ರಾಮಕೃಷ್ಣ-ವಿವೇಕಾನಂದರವರೆಗಿನ ಭಾರತೀಯ ಋಷಿಗಳು ಆತ್ಮ ಒಂದೇ, ನಾವೆಲ್ಲ ಅದರ ಅಭಿನ್ನ ಭಾಗಗಳು ಎಂದು ತಮ್ಮ ಆಧ್ಯಾತ್ಮಿಕ ಅನುಭವದಿಂದ ಹೇಳಿದ್ದಾರೆ. ಇತರರನ್ನು ನೋಯಿಸಿದರೆ ತನ್ನನ್ನೇ ನೋಯಿಸಿಕೊಂಡಂತೆ ಎಂಬ ಈ ಸತ್ಯವೇ ನಿಃಸ್ವಾರ್ಥಕ್ಕೆ

ಆಧಾರ. ಬೈಬಲ್, "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು" ಎನ್ನುತ್ತದೆ. ನಿನ್ನ ನೆರೆಯವನು ನೀನೇ ಎನ್ನುತ್ತದೆ ವೇದಾಂತ.

ವಿಜ್ಞಾನ, ತಾಂತ್ರಿಕತೆಗಳ ಹೆಚ್ಚಿದ ಬಳಕೆಯಿಂದಾಗಿ, ನಮ್ಮ ಜನರು ಆತುರದಿಂದ ವಸ್ತುಗಳನ್ನು ಕೊಳ್ಳುವ ಬಳಕೆದಾರರಾಗಿದ್ದಾರೆ. ಅವರು ಇನ್ನಷ್ಟು ಒಳ್ಳೆಯವರಾಗುತ್ತ ಬರುವ ಬದಲು ಇನ್ನಷ್ಟು ಮತ್ತಷ್ಟು ಹೊಂದುವುದರಿಂದ ಉನ್ನತಿ ಎಂದು ನಂಬುವಂತೆ ಕಾಣುತ್ತಿವೆ. ಮೌಲ್ಯಗಳ ಬದಲಿಗೆ ವಸ್ತುಗಳನ್ನು ಪೇರಿಸಿಡುತ್ತಿದ್ದಾರೆ! ನಾವು ಅಪರಿಗ್ರಹ ಮೌಲ್ಯವನ್ನು ತಿಳಿಸುವ ಮೂಲಕ ಎಳೆಯರಲ್ಲಿ ಈ ಬಳಕೆದಾರತನ ವಿಪರೀತವಾಗಿ ಬೆಳೆಯದಂತೆ ನೋಡಿಕೊಳ್ಳಬಹುದು.

ಎಲ್.ಕೆ.ಜಿ. ಸೀಟಿನಿಂದ ಹಿಡಿದು ಪ್ರಧಾನಮಂತ್ರಿ ಹುದ್ದೆಯವರೆಗೆ ಎಲ್ಲೆಲ್ಲೂ ಸ್ಪರ್ಧೆ. ಈ ಸ್ಪರ್ಧೆಯಲ್ಲಿ ನಿಯಮ, ತತ್ವಗಳಿಗೆ ಗೌರವವಿಲ್ಲ. ಲಂಚ, ಭ್ರಷ್ಟಾಚಾರ, ಅಪ್ರಾಮಾಣಿಕತೆ ಎದ್ದು ತೋರುತ್ತವೆ. ಇದನ್ನು ನಿಲ್ಲಿಸಲು ಸತ್ಯ, ಅಹಿಂಸೆ ಮತ್ತು ಅಸ್ತೇಯ ಮೌಲ್ಯಗಳನ್ನು ಕಲಿಸುವುದಕ್ಕಿಂತ ಬೇರೇನು ಮಾಡಬಹುದು? ಹೀಗೆ ಸಮಾಜವನ್ನು ಎತ್ತಿ ನಿಲ್ಲಿಸಲು ಪ್ರಭಾವೀ ನೀತಿಪಾಠಕ್ಕಿಂತ ಬೇರೆ ಮಾರ್ಗವಿಲ್ಲ.

ಕರ್ತವ್ಯನಿಷ್ಠೆಯಿಂದ, ನೀತಿಯಿಂದ ಜೀವಿಸುತ್ತ ಆತ್ಮಸಾಕ್ಷಾತ್ಕಾರವನ್ನು ಹೊಂದುವುದು ಪ್ರತಿ ಭಾರತೀಯನ ಜೀವನವಾಗಿತ್ತು; ಈಗಲೂ ಆದೀತು. ಹೇಗೆಂದರೆ, ನಮ್ಮ ವಿದ್ಯಾರ್ಥಿಗಳು ತಮ್ಮ ಜೀವನ ಮೌಲ್ಯಗಳನ್ನು ನಮ್ಮ ಮಹಾನ್ ಆಧ್ಯಾತ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ನಿರ್ಧರಿಸಿಕೊಳ್ಳಬೇಕು. ಸಂಪತ್ತಿನ ಕ್ರೋಡೀಕರಣ, ಸಾಮಾಜಿಕ ಸ್ಥಾನಮಾನಗಳು ಜೀವನದ ಗುರಿ ಆಗದು; ಅವು ನೈತಿಕತೆಗೆ, ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಉಪಕಾರಿ ಸಾಧನಗಳಾಗಬಲ್ಲವು ಮಾತ್ರ. ಆಧ್ಯಾತ್ಮಿಕ ಗುರಿಯ ನಿರ್ಧಾರ ಮಾತ್ರ ನಮ್ಮನ್ನು ಆಧುನಿಕತೆಯ ದುಷ್ಪರಿಣಾಮಗಳಿಂದ ರಕ್ಷಿಸಬಲ್ಲುದು.

ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಎಳೆಯರು ಹೃದಯವನ್ನು ಬೆಳೆಸಿಕೊಳ್ಳಬೇಕು. ತಮಗಿಂತ ಕೆಳಹಂತದಲ್ಲಿರುವವರ ಬಗ್ಗೆ ಅವರಲ್ಲಿ ಮೊದಲು ಕಳಕಳಿಯಿರಬೇಕು. ಉದಾರ ಭಾವನೆಯಿಲ್ಲದೆ ಬರಿಯ ಸಂಪತ್ತು, ತಾಂತ್ರಿಕತೆ, ವಿಜ್ಞಾನ ಉಪಯೋಗಕ್ಕೆ ಬಾರವು. ನಾಯಕತ್ವದ ಹೃದಯರಾಹಿತ್ಯವೇ ಈ ಐವತ್ತು ವರ್ಷಗಳ ನಮ್ಮ ದೇಶದ ದುಃಸ್ಥಿತಿಗೆ ಕಾರಣ.

ವಿದೇಶಗಳಲ್ಲಿ, ಅದರಲ್ಲೂ ಅಮೆರಿಕದಲ್ಲಿ ಹಿಂದೂಧರ್ಮ ಎಂದರೆ ವೇದಾಂತ; ವೇದಾಂತವನ್ನು ಅಲ್ಲಿ ರಾಮಕೃಷ್ಣ ಸಂಘದ ಜೊತೆ ಸಮೀಕರಿಸುತ್ತಾರೆ. ಶ್ರೀರಾಮಕೃಷ್ಣರ ಧರ್ಮಸಮನ್ವಯ ಭಾವ ಅಲ್ಲಿ ಜನರ ಹೃದಯವನ್ನು ಪ್ರವೇಶಿಸುತ್ತಿದೆ. ಜೆ.ಡಿ. ಸಾಲಿಂಗರ್ (*J.D Salinger*)ನಂತಹ ಅತ್ಯಂತ ಪ್ರಭಾವೀ ಬರಹಗಾರರು ತಮ್ಮ ಕತೆಗಳ ಮೂಲಕ ವೇದಾಂತವನ್ನು ಪ್ರಚಾರ ಮಾಡಿದರೆ, ಜೋಸೆಫ್ ಕ್ಯಾಂಪ್‌ಬೆಲ್ (*Joseph Campbell*) ರಂತಹ ಮಹಾನ್ ಬುದ್ಧಿಜೀವಿಗಳು ಶ್ರೀರಾಮಕೃಷ್ಣರ ಹೇಳಿಕೆಗಳನ್ನು ತಮ್ಮ ಬರಹಗಳಲ್ಲಿ ಮೇಲಿಂದ ಮೇಲೆ ಉದ್ಧರಿಸುತ್ತಾರೆ. ವೇದಾಂತವನ್ನು ನೀಡಿದ ನಾಡು ನಮ್ಮದು ಎಂದು ನಾವು ಹೆಮ್ಮೆಪಡಬೇಕು.

ಕೊನೆಯಲ್ಲಿ ವಿವೇಕಾನಂದರ ಈ ಮಾತನ್ನು ನಾವು ಗಮನಿಸೋಣ: "ನಮಗೆ ಈಗ ಬೇಕಾಗಿರುವ ಶಿಕ್ಷಣ ಪೂರ್ವದ ವೇದಾಂತದ ಜತೆ ಸೇರಿದ ಪಶ್ಚಿಮದ ವಿಜ್ಞಾನ." ವೇದಾಂತ ಮತ್ತು ವಿಜ್ಞಾನದ ಉಪಕರಣಗಳಿಂದ ನಾವು ಶಕ್ತಿಯುತ ದೃಢ ದೇಶವನ್ನು ಕಟ್ಟುವೆವು. ಶಾಂತಿಪ್ರಿಯ ರಾಷ್ಟ್ರ ಭಾರತದಲ್ಲಿ ಜಾತಿ, ಜನಾಂಗ ಧರ್ಮಗಳಲ್ಲಿನ ವೈಮನಸ್ಯಗಳು ಭೂತಕಾಲದ ಮಾತಾಗುವುವು. ಶ್ರೀರಾಮಕೃಷ್ಣ-ವಿವೇಕಾನಂದರ ತತ್ತ್ವಗಳಿಂದ ಪ್ರಭಾವಿತರಾದವರ ಪುಟ್ಟ ಗುಂಪಿನಲ್ಲಿ ನಾವು ಈಗಾಗಲೇ ಇಂತಹ ಬೆಳವಣಿಗೆಯನ್ನು ಕಾಣುತ್ತಿದ್ದೇವೆ.

## ಸ್ವಾಮೀಜಿಯ ಮಡಿಲಲ್ಲಿ ಮಗು

ಸ್ವಾಮಿ ವಿವೇಕಾನಂದರು ಮಹಾಬಲೇಶ್ವರದಲ್ಲಿ ಡಾ.ವಿಶ್ವನಾಥ ಜೋಶಿ ವಕೀಲರ ಅತಿಥಿಯಾಗಿ ಸುಮಾರು ಒಂದು ತಿಂಗಳು ಇದ್ದರು. ಅವರ ಮನೆಯಲ್ಲಿ ೬ ತಿಂಗಳ ಪುಟ್ಟಮಗು ಪ್ರತಿದಿನವೂ ಸಂಜೆಯಾಗುತ್ತಲೇ ಕಿರಿಕಿರಿ ಮಾಡಲು ಪ್ರಾರಂಭಿಸುತ್ತಿತ್ತು. ರಾತ್ರಿಯಿಡೀ ಒಂದೇ ಸಮನೆ ಅಳುತ್ತಿತ್ತು; ಹೀಗಾಗಿ ತಾಯಿಗೆ ರಾತ್ರಿ ನಿದ್ದೆಯೇ ಇಲ್ಲದಂತಾಗಿತ್ತು.

ಅದನ್ನು ಸ್ವಾಮೀಜಿ ಗಮನಿಸಿ—"ತಾಯೀ, ದಿನವಿಡೀ ಕೆಲಸಮಾಡುವ ನಿಮಗೆ ರಾತ್ರಿ ನಿದ್ರೆಯಿಲ್ಲದಿದ್ದರೆ ಹೇಗೆ? ರಾತ್ರಿವೇಳೆ ನೀವು ಮಗುವನ್ನು ನನ್ನ ಕೈಗೆ ಕೊಡಿ. ನಾನು ನೋಡಿಕೊಳ್ಳುತ್ತೇನೆ" ಎಂದರು. ಸ್ವಾಮೀಜಿಗೇಕೆ ತೊಂದರೆಯೆಂದು ಮೊದಲು ಅವರು ಒಪ್ಪಲಿಲ್ಲ. ಆದರೆ ಸ್ವಾಮೀಜಿ ಬಿಡಲಿಲ್ಲ. ಸುಮ್ಮನೆ ಒಂದು ಸಲ ನೋಡಬಾರದೇಕೆ? ಎಂದು ಅವರು ರಾತ್ರಿ ಮಗುವನ್ನು ಸ್ವಾಮೀಜಿಯ ಕೈಗೆ ಕೊಟ್ಟರು.

ಸ್ವಾಮೀಜಿ, ಮಗುವನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಕೂತರು. ತಮ್ಮಷ್ಟಕ್ಕೆ ತಾವೇ ಧ್ಯಾನಮಗ್ನರಾದರು. ಏನಾಶ್ಚರ್ಯ! ಸ್ವಲ್ಪವೂ ಕಿರಿಕಿರಿ ಮಾಡದೆ ಮಗು ಶಾಂತವಾಗಿ ನಿದ್ರಿಸಿತು. ಇದು ಹೀಗೆಯೇ ಹಲವಾರು ದಿನ ನಡೆಯಿತು.

ಆ ಹೆಣ್ಣುಮಗು ಮುಂದೆ ದೊಡ್ಡವಳಾದ ಮೇಲೆ ಸಾಂಗ್ಲಿಯ ಮಹಾರಾಜನ ಪಟ್ಟದ ರಾಣಿಯಾದಳು. ಅವಳು ತನ್ನ ಜೀವನದುದ್ದಕ್ಕೂ ಎಂತಹ ಉದ್ವೇಗಕರ ಸನ್ನಿವೇಶದಲ್ಲಿಯೂ ಶಾಂತವಾಗಿಯೇ ಇರುತ್ತಿದ್ದಳು. "ಬಾಲ್ಯದಲ್ಲಿ ಆಕೆ ಸ್ವಾಮೀಜಿಯಿಂದ ಪಡೆದುಕೊಂಡ ಕೃಪೆಯ ಫಲವಿದು" ಎಂದು ಆಕೆಯನ್ನು ಕುರಿತು ಜನರು ಮಾತನಾಡಿಕೊಳ್ಳುತ್ತಿದ್ದರು.